<u>**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**</u>

<u>**ಸಿ.ಸಿ.389/2022**</u>

| | | |
|---|---|---|
| ಸಾಕ್ಷಿದಾರರ ಹೆಸರು | : ರವಿ ಜಿ.ಎ. | ಪ್ರಾಸಾ-10 |
| ತಂದೆಯ ಹೆಸರು | : ಅಣ್ಣಪ್ಪ | ಚಾಸಾ-24 |
| ವಯಸ್ಸು | : 40 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪಿ.ಎಸ್.ಐ | ದಿನಾಂಕಃ27.02.2026 |
| ವಾಸಸ್ಥಳ | : ಆಲ್ದೂರು ಪೋಲಿಸ್ ಠಾಣೆ. | |

<u>**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**</u>

ನಾನು ದಿ.18.01.2019 ರಿಂದ ದಿ.04.06.2022 ರವರೆಗೂ ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.22.11.2021 ರಂದು ಪ್ರಕರಣದ ಕಡತವನ್ನು ಚಾಸಾ-23 ರವರಿಂದ ಪಡೆದುಕೊಂಡಿರುತ್ತೇನೆ. ಅದೇ ದಿನ ಆರೋಪಿಗಳು ಪತ್ತೆಗಾಗಿ ಚಾಸಾ-11 ಮತ್ತು 12 ರವರನ್ನು ನೇಮಕ ಮಾಡಿರುತ್ತೇನೆ. ಅದೇ ದಿನ ಸ.6.30 ರ ಸಮಯಕ್ಕೆ ಠಾಣೆಯಲ್ಲಿ ಆರೋಪಿಯನ್ನು ವರದಿಯೊಂದಿಗೆ ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ನಂತರ ನಾನು ಆರೋಪಿಯನ್ನು ವಿಚಾರಣೆ ಮಾಡಿ, ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಆರೋಪಿಯನ್ನು ದಸ್ತಗಿರಿ ನಿಯಮವನ್ನು ಪಾಲನೆ ಮಾಡಿ, ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ದಿ.02.12.2021 ರಂದು ನ್ಯಾಯಾಲಯಕ್ಕೆ ಕಲಂ 164 ರಡಿಯಲ್ಲಿ ಹೇಳಿಕೆಯನ್ನು ಪಡೆದುಕೊಳ್ಳಲು ಮನವಿಯನ್ನು ಮಾಡಿಕೊಂಡಿರುತ್ತೇನೆ. ಅದೇ ದಿನ ನ್ಯಾಯಾಲಯದಿಂದ ಕಲಂ 164 ರ ಹೇಳಿಕೆಯನ್ನು ಸ್ವೀಕರಿಸಿಕೊಂಡಿರುತ್ತೇನೆ. ದಿ.04.12.2021 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಅಲ್ಲಿ ಹಾಜರಿ ಸಿಕ್ಕ ಚಾಸಾ-7 ಮತ್ತು 8 ರವರಿಗೆ ನೋಟೀಸನ್ನು ಜಾರಿ ಮಾಡಿ, ಚಾಸಾ-1 ರವರು ತೋರಿಸಿದ ಸ್ಥಳದ ಮಹಜರ್ ಕ್ರಮವನ್ನು ಜರುಗಿಸಿರುತ್ತೇನೆ. ಸದರಿ ಮಹಜರ್ ನ್ನು ಬೆ.11.45 ರಿಂದ 12.45 ರವರೆಗೂ ಚಾಸಾ-7 ಮತ್ತು 8 ರವರ ಸಮಕ್ಷಮ ಜರುಗಿಸಿರುತ್ತೇನೆ. ಸದರಿ ಸಮಯದಲ್ಲಿ ಚಾಸಾ-1 ರವರು ಒಂದು ನೈಟಿಯನ್ನು ಹಾಜರುಪಡಿಸಿರುತ್ತಾರೆ. ಸದರಿ ಸಮಯದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿ ಒಂದು ಫೋಟೋವನ್ನು ತೆಗೆದಿರುತ್ತೇನೆ.

ನಂತರ ಠಾಣೆಗೆ ಬಂದು ಮಹಜರ್ ಕಾಲದಲ್ಲಿ ವಶಕ್ಕೆ ಪಡೆದ ಒಂದು ನೈಟಿಯನ್ನು ಠಾ.ಮಾ.ಸಂ.223/2021 ರಡಿಯಲ್ಲಿ ನಮೂದಿಸಿ, ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ದಿ.04.12.2021 ರಂದು ಚಾಸಾ-4 ರಿಂದ 6 ಮತ್ತು 2 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ.06.12.2021 ರಂದು ಕಲಂ 65 ಬಿ ರಡಿಯ ದೃಢೀಕೃತ ಪ್ರತಿಯನ್ನು ಚಾಸಾ-16 ರವರಿಂದ ಸ್ವೀಕರಿಸಿಕೊಂಡಿರುತ್ತೇನೆ. ದಿ.05.12.2021 ರಂದು ಕಲಂ 91 Cr.P.C. ರಡಿಯಲ್ಲಿ ಚಾಸಾ-1 ರವರಿಗೆ ನೋಟೀಸನ್ನು ಜಾರಿ ಮಾಡಿರುತ್ತೇನೆ. ದಿ.06.12.2021 ರಂದು ಚಾಸಾ-1 ರವರು ಠಾಣೆಗೆ ಹಾಜರಾಗಿ ದಿ.21.11.2021 ರಂದು ಕೃತ್ಯಕ್ಕೆ ಉಪಯೋಗಿಸಿದ ಕವರ್

ನ್ನು ಹಾಜರುಪಡಿಸಿದ್ದು, ಸದರಿ ವಸ್ತುವನ್ನು ಚಾಸಾ-9 ಮತ್ತು 10 ರವರ ಸಮಕ್ಷಮ ಬೆ.11.05 ರಿಂದ 12.05 ರವರೆಗೂ ಮಹಜರ್ ಕ್ರಮವನ್ನು ಜರುಗಿಸಿ ಅಮಾನತುಪಡಿಸಿಕೊಂಡಿರುತ್ತೇನೆ. ಸದರಿ ಸಮಯದಲ್ಲಿ ಫೋಟೋಗಳನ್ನು ತೆಗೆಯಲಾಗಿರುತ್ತದೆ. ವಶಪಡಿಸಿಕೊಂಡ ವಸ್ತುವನ್ನು ಠಾ.ಮಾ.ಸಂ.227/2021 ರಲ್ಲಿ ನಮೂದಿಸಿ, ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡಿರುತ್ತೇನೆ. ಅದೇ ದಿನ ಚಾಸಾ-18 ರವರಿಂದ Stomach wash ಪಡೆದುಕೊಂಡು, ಠಾಣಾ ಮಾಲು ಪಟ್ಟಿ 228/2021 ರಲ್ಲಿ ನಮೂದು ಮಾಡಿರುತ್ತೇನೆ.

ದಿ.14.12.2021 ರಂದು ವಶಪಡಿಸಿಕೊಂಡಂತಹ Stomach wash ಮತ್ತು Pesticides ನ್ನು ಚಾಸಾ-20 ರವರ ಮುಖೇನ ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿರುತ್ತೇನೆ. ದಿ.20.12.2021 ರಂದು ಚಾಸಾ-19 ರವರಿಗೆ ಕೃತ್ಯ ನಡೆದ ಸ್ಥಳದ ವರದಿಯನ್ನು ಕೋರಿ ಮನವಿ ಮಾಡಿಕೊಂಡಿರುತ್ತೇನೆ. ದಿ.24.12.2021 ರಂದು ಚಾಸಾ-19 ರವರಿಂದ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿ.11.01.2022 ರಂದು ಚಾಸಾ-18 ರವರಿಂದ ಗಾಯದ ದೃಢೀಕರಣ ಪತ್ರವನ್ನು ಕೋರಿ ಮನವಿಯನ್ನು ಮಾಡಿಕೊಂಡಿರುತ್ತೇನೆ. ದಿ.14.01.2022 ರಂದು ಚಾಸಾ-18 ರವರಿಂದ ವರದಿಯನ್ನು ಸ್ವೀಕರಿಸಿಕೊಂಡಿರುತ್ತೇನೆ. ದಿ.28.03.2022 ರಂದು ಚಾಸಾ-17 ರವರಿಂದ ವರದಿಯನ್ನು ಸ್ವೀಕರಿಸಿಕೊಂಡಿರುತ್ತೇನೆ. ದಿ.07.03.2022 ರಂದು ಚಾಸಾ-18 ರವರಿಂದ ಚಾಸಾ-17 ರವರು ನೀಡದ ವರದಿಯನ್ನು ಕುರಿತು ಅಭಿಪ್ರಾಯವನ್ನು ಪಡೆದುಕೊಂಡಿರುತ್ತೇನೆ. ದಿ.22.11.2021 ರಂದು ಚಿಕ್ಕಮಗಳೂರು, SDPO ರವರಿಗೆ ಮನವಿಯನ್ನು ಮಾಡಿಕೊಂಡಿರುತ್ತೇನೆ. ಅದೇ ದಿನ ಸದರಿಯವರ ವರದಿಯನ್ನು ನೀಡಿರುತ್ತಾರೆ. ದಿ.11.04.2022 ರಂದು ತನಿಖೆಯು ಪೂರ್ಣಗೊಂಡಿದ್ದು ಆರೋಪಿಯ ವಿರುದ್ಧ ಆರೋಪವು ಸಾಬೀತಾದ ಕಾರಣ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ.

ಸಾಕ್ಷಿಯು ನಿಪಿ-2 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3 ಮತ್ತು 4 ರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯು ನಿಪಿ-9 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-5 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-5(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-11, 12 ಮತ್ತು 13 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-11(ಸಿ), 12(ಬಿ) ಮತ್ತು 13(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.22.11.2021 ರಂದು ದಾಖಲು ಮಾಡಿಕೊಂಡ ಆರೋಪಿಯ ಸ್ವ ಇಚ್ಛಾ ಹೇಳಿಕೆ ಮತ್ತು ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ, ಸದರಿ ಸ್ವ ಇಚ್ಛಾ ಹೇಳಿಕೆಯನ್ನು ನಿಪಿ-15 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.22.11.2021 ರಂದು ಚಾಸಾ-18 ರವರಿಗೆ ನೀಡಿದ ಮನವಿ ಪತ್ರ ಮತ್ತು ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ, ಅವುಗಳನ್ನು ಕ್ರಮವಾಗಿ ನಿಪಿ-17 ಮತ್ತು ನಿಪಿ-18 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-17(ಎ) ಮತ್ತು 18(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.25.11.2021 ರಂದು ಚಾಸಾ-11 ಮತ್ತು 12 ರವರಿಗೆ ನೀಡಿದ ಜ್ಞಾಪನಾ ಪತ್ರ ಮತ್ತು ಅದರಲ್ಲಿ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಜ್ಞಾಪನಾ

ಪತ್ರವನ್ನು ನಿಪಿ-19 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ದಿ.06.12.2021 ರಂದು ಚಾಸಾ-18 ರವರಿಗೆ ನೀಡಿದ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು, ಸದರಿ ಮನವಿ ಪತ್ರವನ್ನು ನಿಪಿ-20 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-18 ರವರಿಂದ ಸ್ವೀಕರಿಸಿಕೊಂಡ ವರದಿಯನ್ನು ನಿಪಿ-21 ಮತ್ತು 22 ಸಾಕ್ಷಿಯ ಸಹಿಯನ್ನು ನಿಪಿ-21(ಎ) ಮತ್ತು 22(ಎ) ಎಂದು ಗುರುತಿಸಲಾಯಿತು. ದಿ.12.12.2021 ರಂದು ಚಾಸಾ-17 ರವರಿಗೆ ನೀಡಿದ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು, ಸದರಿ ಪತ್ರವನ್ನು ನಿಪಿ-23 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-23(ಎ) ಎಂದು ಗುರುತಿಸಲಾಯಿತು. ಚಾಸಾ-20 ರವರ ಮುಖಾಂತರ ನೀಡಿರುವ ಸೂಚನಾವಳಿಯನ್ನು ನಿಪಿ-24 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-24(ಎ) ಎಂದು ಗುರುತಿಸಲಾಯಿತು. ಚಾಸಾ-17 ರವರಿಂದ ಸ್ವೀಕರಿಸಿಕೊಂಡ ವರದಿಯನ್ನು ನಿಪಿ-25 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-25(ಎ) ಎಂದು ಗುರುತಿಸಲಾಯಿತು. ದಿ.02.12.2021 ರಂದು ನ್ಯಾಯಾಲಯಕ್ಕೆ ಕಲಂ 164 ರಡಿಯಲ್ಲಿ ಹೇಳಿಕೆಯನ್ನು ಪಡೆದುಕೊಳ್ಳುವಂತೆ ನೀಡಿದ ಮನವಿ ಪತ್ರವನ್ನು ನಿಪಿ-26 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-26(ಎ) ಎಂದು ಗುರುತಿಸಲಾಯಿತು. ದಿ.02.12.2021 ರಂದು ಕಲಂ 164 ರ ಹೇಳಿಕೆಯನ್ನು ಸ್ವೀಕರಿಸಿಕೊಂಡಿರುವ ಬಗ್ಗೆ ಗುರುತಿಸಿದ್ದು, ಸದರಿ ಹೇಳಿಕೆಯನ್ನು ನಿಪಿ-27 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-27(ಎ) ಎಂದು ಗುರುತಿಸಲಾಯಿತು.

ಚಾಸಾ-18 ರವರಿಗೆ ನೀಡಿದ ಮನವಿ ಪತ್ರವನ್ನು ನಿಪಿ-28 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-28(ಎ) ಎಂದು ಗುರುತಿಸಲಾಯಿತು. ಚಾಸಾ-19 ರವರಿಗೆ ನೀಡಿದ ಮನವಿ ಪತ್ರವನ್ನು ನಿಪಿ-29 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-29(ಎ) ಎಂದು ಗುರುತಿಸಲಾಯಿತು. ದಿ.14.12.2021 ರಂದು ಚಾಸಾ-19 ರವರಿಂದ ಸ್ವೀಕರಿಸಿಕೊಂಡ ವರದಿಯನ್ನು ನಿಪಿ-30 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-30(ಎ) ಎಂದು ಗುರುತಿಸಲಾಯಿತು. ಚಾಸಾ-19 ರವರಿಂದ ಸ್ವೀಕರಿಸಿಕೊಂಡ ವರದಿಯನ್ನು ಒಟ್ಟಾಗಿ ನಿಪಿ-31 ರಿಂದ 35 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-31(ಎ) ರಿಂದ ನಿಪಿ-35(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ವಸ್ತುಗಳನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ಎಂ.ಒ.1(ಸಿ) ರಿಂದ 3(ಸಿ) ಎಂದು ಗುರುತಿಸಲಾಯಿತು.

## ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ

ಸಿ.ಡಿ.ಆರ್. ನ್ನು ಸ್ವೀಕರಿಸಿಕೊಂಡ ನಂತರ ನಾನು ಪರಿಶೀಲಿಸಿರುತ್ತೇನೆ. ಸದರಿ ದಾಖಲಾತಿಯಲ್ಲಿ 'ಎ' ಪಾರ್ಟಿ ಎಂದು ನಮೂದಿಸಿರುವ ದೂರವಾಣಿ ಸಂಖ್ಯೆಯು ಕರೆಯನ್ನು ಮಾಡಿರುವ ವ್ಯಕ್ತಿಗೆ ಸಂಬಂಧಿಸಿದ್ದಾಗಿರುತ್ತದೆ. ಅದೇ ರೀತಿ 'ಬಿ' ಪಾರ್ಟಿ ಎಂದು ನಮೂದಿಸಿರುವ ಸಂಖ್ಯೆಯ ಕರೆಯನ್ನು ಸ್ವೀಕರಿಸಿದವರಿಗೆ ಸಂಬಂಧಿಸಿದ್ದಾಗಿರುತ್ತದೆ. ಸದರಿ ದಾಖಲಾತಿಯಲ್ಲಿ ಕಾಲ್ ಇನ್ ಎಂದು ತೋರಿಸಿರುವ ಸಂಖ್ಯೆಯು ಕರೆಯನ್ನು ಸ್ವೀಕರಿಸಿದವರಿಗೆ ಸಂಬಂಧಿಸಿರುತ್ತದೆ. 'ಎ' ಪಾರ್ಟಿ ಎಂದು ನಮೂದಿಸಿರುವ ದೂರವಾಣಿ ಸಂಖ್ಯೆಯು ಆರೋಪಿಗೆ ಸಂಬಂಧಿಸಿರುತ್ತದೆ. 'ಬಿ' ಪಾರ್ಟಿ ಎಂದು ನಮೂದಿಸಿರುವ ಸಂಖ್ಯೆಯು ಪಿರ್ಯಾದುದಾರರರಿಗೆ ಸಂಬಂಧಿಸಿದ್ದಾಗಿರುತ್ತದೆ. ದೂರವಾಣಿ ಕರೆಯ ಅವಧಿಯನ್ನು ಸೆಕೆಂಡ್ಸ್ ಗಳಲ್ಲಿ ನಮೂದಿಸಲಾಗಿರುತ್ತದೆ. ಸದರಿ

ದಾಖಲಾತಿಯಲ್ಲಿ ಮೊದಲಿಗೆ ನಮೂದಿಸಿರುವ ಅವಧಿಯು ಪಿರ್ಯಾದುದಾರರಿಂದ ಆರೋಪಿಗೆ ಬಂದಿರುವ ದೂರವಾಣಿಯ ಅವಧಿಯ ಸಮಯವಾಗಿರುತ್ತದೆ. 7338528321 ಸಂಖ್ಯೆಯು ಆರೋಪಿಗೆ ಸಂಬಂಧಿಸಿದ್ದಾಗಿರುತ್ತದೆ. ದಿ.10.09.2021 ರಂದು ಮೊದಲಿಗೆ ಪಿರ್ಯಾದುದಾರರು ಆರೋಪಿಗೆ ಕರೆ ಮಾಡಿರುತ್ತಾರೆ ಎಂದರೆ ಸರಿ. ಪಿರ್ಯಾದುದಾರರು ಆ ದಿನ ಕರೆ ಮಾಡಿ ಆರೋಪಿಯೊಟ್ಟಿಗೆ 130 ಸೆಕೆಂಡ್ ಗಳ ಕಾಲ ಮಾತನಾಡಿರುತ್ತಾರೆ ಎಂದರೆ ಸರಿ.

ಪಿರ್ಯಾದುದಾರರು ನ್ಯಾಯಾಧೀಶರವರ ಮುಂದೆ ನೀಡಿರುವ ಹೇಳಿಕೆಯನ್ನು ನಾನು ಓದಿ ನೋಡಿರುತ್ತೇನೆ. ಸದರಿ ಹೇಳಿಕೆಯಲ್ಲಿ ಪಿರ್ಯಾದುದಾರರು ಆರೋಪಿಯಿಂದ ಬೆದರಿಕೆ ಕರೆ ಬಂದು ಬಲಾತ್ಕಾರದ ಬಗ್ಗೆ ಎಲ್ಲಿಯೂ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಹೇಳಿಕೆಯಲ್ಲಿ ಆ ರೀತಿಯಾದ ಪದವನ್ನು ಬಳಸಿರುವುದಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಸದರಿ ಹೇಳಿಕೆಯಲ್ಲಿ ಆರೋಪಿಯು ಪಿರ್ಯಾದುದಾರರಿಗೆ ಜೀವ ಬೆದರಿಕೆಯನ್ನು ಹಾಕಿರುವ ಬಗ್ಗೆಯು ನಮೂದು ಇಲ್ಲ ಎಂದರೆ ಸರಿ. ಆರೋಪಿಯು ಪಿರ್ಯಾದುದಾರರಿಗೆ ಹಲ್ಲೆ ಮಾಡಿರುವ ಬಾಬ್ತು ವೈದ್ಯರಿಂದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ಸದರಿ ವರದಿಯಲ್ಲಿ ಪಿರ್ಯಾದುದಾರರಿಗೆ ಯಾವುದೇ ಗಾಯಗಳು ಆಗಿರುವುದಿಲ್ಲ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಆರೋಪಿಯು ಪಿರ್ಯಾದುದಾರರಿಗೆ ಯಾವುದೇ ಹಲ್ಲೆ ಮಾಡಿರುವುದಿಲ್ಲ, ಕರೆ ಮಾಡಿ ಕೊಲೆ ಬೆದರಿಕೆಯನ್ನು ಹಾಕಿರುವುದಿಲ್ಲ ಮತ್ತು ಬಲಾತ್ಕಾರಕ್ಕೆ ಪ್ರಯತ್ನ ಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಪಿರ್ಯಾದುದಾರರು ನೀಡಿರುವ ದೂರಿನ ಪೂರಕವಾಗಿ ಯಾವುದೇ ದಾಖಲಾತಿಗಳು ಇಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-23 ರವರಿಂದ ಪ್ರಕರಣದ ಕಡತವನ್ನು ಮುಂದಿನ ತನಿಖೆಯ ಸಂಬಂಧ ಸ್ವೀಕರಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಆರೋಪಿಯಿಂದ ಯಾವುದೇ ಸ್ವ ಇಚ್ಚಾ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಪಿರ್ಯಾದುದಾರರಿಗೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ನಾನು ಸ್ಥಳ ಮಹಜರ್ ಗೆ ಹೋದ ಸಮಯದಲ್ಲಿ ಪಿರ್ಯಾದುದಾರರು ತಮ್ಮ ಮನೆಯಲ್ಲಿಯೇ ಇದ್ದರು. ನನಗೆ ಪಿರ್ಯಾದುದಾರರ ಮನೆಯನ್ನು ಯಾರು ತೋರಿಸಿರುವುದಿಲ್ಲ, ನನಗೆ ಅವರ ಮನೆಯ ವಿಳಾಸ ತಿಳಿದಿತ್ತು. ಪಿರ್ಯಾದುದಾರರು ಹಲ್ಲೆಯ ನಂತರ ಆಸ್ಪತ್ರೆಯಲ್ಲಿ ದಾಖಲಾದ ಸಮಯದಲ್ಲಿ ಗ್ರಾಮಸ್ಥರು ನನಗೆ ಪಿರ್ಯಾದುದಾರರ ವಿಳಾಸವನ್ನು ತಿಳಿಸಿರುತ್ತಾರೆ. ಸದರಿ ವಿಷಯದ ಕುರಿತು ನಾನು ಮಹಜರ್ ನಲ್ಲಿ ನಮೂದು ಮಾಡಿರುವುದಿಲ್ಲ. ಚಾಸಾ-7 ಮತ್ತು 8 ರವರ ಪರಿಚಯ ನನಗೆ ಈ ಪೂರ್ವದಲ್ಲಿ ಇರಲಿಲ್ಲ. ಬೆ.11.30 ರ ಸಮಯಕ್ಕೆ ನಾನು ಠಾಣೆಯಿಂದ ಸ್ಥಳ ಮಹಜರ್ ಗೆಂದು ಹೊರಟಿರುತ್ತೇನೆ. ಸ್ಥಳ ಮಹಜರ್ ಗೆ ಹೋಗುವ ಪೂರ್ವದಲ್ಲಿ ಗಸ್ತು ಕಾರ್ಯಾಚರಣೆಗೆ ಹೋಗಿರುವ ಬಗ್ಗೆ ನನಗೆ ನೆನಪಾಗುತ್ತಿಲ್ಲ. ಆ ಸಮಯದಲ್ಲಿ ಠಾಣಾ SHO ಆಗಿ ಯಾರು ಕರ್ತವ್ಯ ನಿರ್ವಹಿಸುತ್ತಿದ್ದರು ಎಂದು ನೆನಪಾಗುತ್ತಿಲ್ಲ. ಸಾಮಾನ್ಯವಾಗಿ ನಾವು ಗಸ್ತು ಕಾರ್ಯಾಚರಣೆಗೆ ಹೋದ ಸಮಯದಲ್ಲಿ ಅದನ್ನು ಠಾಣಾ ದಿನಚರಿಯಲ್ಲಿ ನಮೂದಿಸಲಾಗುತ್ತದೆ. ಆ ದಿನ ಸ್ಥಳ ಮಹಜರ್ ಗೆ ಹೋದ ಸಮಯದಲ್ಲಿ ತನಿಖಾ ಸಂಬಂದ ಹೊರಗೆ ಹೋದ ಕಾರಣ ಠಾಣಾ ದಿನಚರಿಯಲ್ಲಿ ನಮೂದಿಸಲಾಗಿರುವುದಿಲ್ಲ.

ತನಿಖೆಗೆ ಹೋದ ಸಮಯದಲ್ಲಿ ಅದನ್ನು ನಮೂದು ಮಾಡುವ ಪುಸ್ತಕವನ್ನು ಹಾಜರು

ಮಾಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಾನು ಯಾವುದೇ ಸ್ಥಳ ಮಹಜರ್ ಗೆ ಹೋಗಿರುವುದಿಲ್ಲ ಮತ್ತು ಅದನ್ನು ದಿನಚರಿಯಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿಯಾಗಿ ಮಹಜರ್ ಗೆ ಹೋಗಿದ್ದಲ್ಲಿ ಮತ್ತು ಅದನ್ನು ನಮೂದಿಸಿದ್ದಲ್ಲಿ ಸದರಿ ಪುಸ್ತಕವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತಿದ್ದೆ ಎಂದರೆ ಸಾಕ್ಷಿಯು ತನಿಖೆಯ ಬಾಬ್ತು ಸ್ವೀಕರಿಸಿಕೊಂಡ ದಾಖಲಾತಿಗಳನ್ನು ಮಾತ್ರ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಬೆ.11.40 ರ ಸಮಯಕ್ಕೆ ನಾನು ಕಿತ್ತಲೆಗಂಡಿ ಗ್ರಾಮಕ್ಕೆ ಹೋಗಿರುತ್ತೇನೆ. ಚಾಸಾ-7 ಮತ್ತು 8 ರವರಿಗೆ ಪಿರ್ಯಾದುದಾರರ ಮನೆಯ ಮುಂದೆ ಬೆ.11.40 ಕ್ಕೆ ಜಾರಿ ಮಾಡಿ 11.45 ರಿಂದ ಮಹಜರ್ ನ್ನು ಪ್ರಾರಂಭಿಸಿರುತ್ತೇನೆ. ಚಾಸಾ-7 ಮತ್ತು 8 ರವರಿಗೆ ಪಿರ್ಯಾದುದಾರರ ಮನೆಯ ಹತ್ತಿರ ಹಾಜರಿರಬೇಕು ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ನೋಟೀಸ್ ಜಾರಿ ಮಾಡಿದ ಸ್ಥಳದಿಂದ ಆರೋಪಿಯ ಮನೆಯು 50 ಅಡಿ ದೂರದಲ್ಲಿ ಇರಬಹುದು. ನಾನು ಮಹಜರ್ ಜರುಗಿಸಿದ ಚೆಕ್ಕುಬಂದಿಯನ್ನು ದಾಖಲಾತಿಯನ್ನು ನೋಡದೇ ಹೇಳಲು ಸಾದ್ಯವಿಲ್ಲ. ಪಿರ್ಯಾದುದಾರರಿಂದ ನೈಟಿಯನ್ನು ಬೆ.11.45 ರಿಂದ 12.45 ರವರೆಗೆ ಜರುಗಿಸಿದ ಅಮಾನತ್ ಮಹಜರ್ ಸಮಯದಲ್ಲಿ ಅಮಾನತುಪಡಿಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

ನಿಖರವಾಗಿ ನೈಟಿಯನ್ನು ಎಷ್ಟು ಗಂಟೆಗೆ ಅಮಾನತುಪಡಿಸಿಕೊಂಡಿರುತ್ತೇನೆ ಎಂದು ಹೇಳಲು ಸಾದ್ಯವಿಲ್ಲ. ಪಿರ್ಯಾದುದಾರರು ಹಾಜರುಪಡಿಸಿದ ನೈಟಿಯು ಯಾವ ಭಾಗದಲ್ಲಿ ಹರಿದಿತ್ತು ಎಂದು ನೆನಪಾಗುತ್ತಿಲ್ಲ. ಮಹಜರ್ ಕ್ರಮ ಜರುಗಿಸಿದ ಜಾಗದ ವಿಸ್ತೀರ್ಣವನ್ನು ಹೇಳಲು ಸಾದ್ಯವಿಲ್ಲ. ಮಹಜರ್ ಕ್ರಮ ಜರುಗಿಸಿದ ಸ್ಥಳ ಕ್ಕೆ ಹೋಗಲು ಯಾವುದೇ ಬಾಗಿಲು ಇದೆಯಾ ಎಂದರೆ ಸಾಕ್ಷಿಯು ಸದರಿ ಜಾಗವು ಶೆಡ್ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಶೆಡ್ ಗೆ ವಿದ್ಯುತ್ ಸಂಪರ್ಕ ಇರುವ ಬಗ್ಗೆ ನನಗೆ ಈಗ ನೆನಪಾಗುತ್ತಿಲ್ಲ. ಮಹಜರ್ ನ್ನು ಚಾಸಾ-16 ರವರು ಬರವಣಿಗೆ ಮಾಡಿರುತ್ತಾರೆ. ಪಿರ್ಯಾದುದಾರರು ನೈಟಿಯನ್ನು ತಮ್ಮ ಮನೆಯಿಂದ ತಂದು ಕೊಟ್ಟಿರುತ್ತಾರೆ. ನೈಟಿಯೊಟ್ಟಿಗೆ ಫೋಟೋವನ್ನು ಶೆಡ್ ನಲ್ಲಿಯೇ ತೆಗೆಯಲಾಗಿರುತ್ತದೆ. ಮಹಜರ್ ಜರುಗಿಸಿದ ಜಾಗವು ದನದ ಕೊಟ್ಟಿಗೆ ರೀತಿಯಲ್ಲಿ ಇರುವುದಿಲ್ಲ. ಸದರಿ ಶೆಡ್ ನಲ್ಲಿ ಮನೆಗೆ ಬಳಕೆಯಾಗುವ ವಸ್ತುಗಳನ್ನು ಇರಿಸಲಾಗಿತ್ತು, ಅವುಗಳಲ್ಲಿ ಒಂದು ಸಿಲಿಂಡರ್ ಹಾಗೂ ಇನ್ನು ಕೆಲವು ವಸ್ತುಗಳನ್ನು ಶೀಲದಲ್ಲಿ ಇರಿಸಲಾಗಿತ್ತು. ಆ ರೀತಿಯ ವಸ್ತುಗಳು ನಿಪಿ-3 ರಲ್ಲಿ ಕಂಡು ಬರುತ್ತಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಫೋಟೋದ ಹಿಂಬದಿಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಆ ರೀತಿಯಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಪಿರ್ಯಾದುದಾರರಿಂದ ಗುಲಾಬಿ ಬಣ್ಣದ ನೈಟಿಯನ್ನು ವಶಪಡಿಸಿಕೊಂಡಿರುತ್ತೇನೆ. ಸದರಿ ವಿಷಯದ ಕುರಿತು ನಾನು ಮಹಜರ್ ನಲ್ಲಿ ನಮೂದಿಸಿರುತ್ತೇನೆ. ಮಹಜರ್ ಸಮಯದಲ್ಲಿ ಚಾಸಾ-16 ರವರು ಫೋಟೋವನ್ನು ಅವರ ಮೊಬೈಲ್ ನಿಂದ ತೆಗೆದಿರುತ್ತಾರೆ. ನಾನು ಆ ದಿನ ಯಾವುದೇ ಮಹಜರ್ ಕ್ರಮವನ್ನು ಜರುಗಿಸಿರುವುದಿಲ್ಲ, ನೈಟಿಯನ್ನು ವಶಪಡಿಸಿಕೊಂಡಿರುವುದಿಲ್ಲ ಮತ್ತು ಸದರಿ ಮಹಜರ್ ನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಫೋಟೋಗಳನ್ನು ಎ.ಐ ತಂತ್ರಜ್ಞಾನವನ್ನು ಬಳಸಿ ಮಾಡಬಹುದು ಎಂಬುದರ

ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಈ ಪ್ರಕರಣದಲ್ಲಿ ಹಾಜರುಪಡಿಸಿರು ಫೋಟೋಗಳನ್ನು ಎ.ಐ ತಂತ್ರಜ್ಞಾನವನ್ನು ಬಳಸಿ ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಳ್ಳಲು ಯಾವುದೇ ನೋಟೀಸನ್ನು ನೀಡಿರುವುದಿಲ್ಲ. ದಿ.04.12.2021 ರಂದು ಸಾಕ್ಷಿದಾರರ ಹೇಳಿಕೆಯನ್ನು ಠಾಣೆಯಲ್ಲಿ ಪಡೆದುಕೊಂಡಿರುತ್ತೇನೆ. ಮಹಜರ್ ಕಾಲದಲ್ಲಿ ಮೌಖಿಕವಾಗಿ ಯಾವ ವ್ಯಕ್ತಿಗಳಿಗೆ ತಿಳಿಸಿರುತ್ತೇನೆ ಎಂದು ಈಗ ನೆನಪಾಗುತ್ತಿಲಲ್ಲ. ಮಹಜರ್ ಕಾಲದಲ್ಲಿ ಮೌಖಿಕವಾಗಿ ತಿಳಿಸಿದ ಮೇರೆಗೆ ಸಾಕ್ಷಿದಾರರು ಠಾಣೆಗೆ ಹಾಜರಾಗಿ ಹೇಳಿಕೆಯನ್ನು ನೀಡಿರುತ್ತಾರೆ. ನಾನು ಸಾಕ್ಷಿದಾರರಿಗೆ ಮೌಖಿಕವಾಗಿ ಹೇಳಿಕೆಗೆ ಹಾಜರಾಗುವಂತೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

ಸಾಕ್ಷಿದಾರರ ಹೇಳಿಕೆಯನ್ನು ಪ್ರಕರಣಕ್ಕಾಗಿ ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಕಲಂ 65 ಬಿ ರಡಿಯ ಪ್ರತಿಯನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಪಿರ್ಯಾದುದಾರರಿಗೆ ನೀಡಿದ ನೋಟೀಸಿನ ಸಮಯವನ್ನು ಹೇಳಲು ಸಾದ್ಯವಿಲ್ಲ. ಪಿರ್ಯಾದುದಾರರಿಗೆ ಯಾರ ಮುಖೇನ ನೋಟೀಸನ್ನು ನೀಡಿರುತ್ತೇನೆ ಎಂದು ನೆನಪಾಗುತ್ತಿಲ್ಲ. ಪಿರ್ಯಾದುದಾರರು ದಿ.06.12.2021 ರಂದು ಬೆ.11.00 ರ ಸಮಯಕ್ಕೆ ಠಾಣೆಗೆ ಹಾಜರಾಗಿ ಕೀಟ ನಾಶಕ ಇರುವಂತಹ ಕವರ್ ನ್ನು ಹಾಜರುಪಡಿಸಿರುತ್ತಾರೆ. ಆ ದಿನ ಪಿರ್ಯಾದುದಾರರೊಟ್ಟಿಗೆ ಯಾರು ಬಂದಿರುವುದಿಲ್ಲ. ಸದರಿ ಸಮಯದಲ್ಲಿ ಠಾಣೆಯಲ್ಲಿ ಹಾಜರಿದ್ದ ಸಾಕ್ಷಿದಾರರ ಎದುರಿಗೆ ಮಹಜರ್ ಕ್ರಮವನ್ನು ಜರುಗಿಸಿರುತ್ತೇನೆ. ಪಿರ್ಯಾದುದಾರರು ಹಾಜರುಪಡಿಸಿದ ಕೀಟ ನಾಶಕವು ರಾಸಾಯನಿಕ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ಸದರಿ ಕೀಟ ನಾಶಕವನ್ನು ಬಳಸಿಕೊಂಡು ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರರು 1 ಕೆ.ಜಿ.ಯ ಕೀಟ ನಾಶಕದ ಕವರ್ ನಲ್ಲಿ 50 ಗ್ರಾಂ ನಷ್ಟು ಕೀಟ ನಾಶಕವನ್ನು ಹಾಜರುಪಡಿಸಿರುತ್ತಾರೆ. ಸದರಿ ಸಮಯದಲ್ಲಿ ನಾನು ತೂಕ ಮಾಡಿ ನೋಡಿರುವುದಿಲ್ಲ. ಸದರಿ ಸಮಯದಲ್ಲಿ ಚಾಸಾ-16 ರವರು ಅವರ ಮೊಬೈಲ್ ನಲ್ಲಿ ಫೋಟೋವನ್ನು ತೆಗೆದಿರುತ್ತಾರೆ. ಸದರಿ ಫೋಟೋವನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

ಚಾಸಾ-18 ರವರಿಗೆ ಮನವಿಯನ್ನು ಯಾರು ಮುಖಾಂತರ ಮಾಡಿರುತ್ತೇನೆ ಮತ್ತು ವರದಿಯನ್ನು ಯಾರ ಮುಖೇನ ಪಡೆದುಕೊಂಡಿರುತ್ತೇನೆ ಎಂದು ನೆನಪಾಗುತ್ತಿಲ್ಲ. ಸದರಿ ವರದಿಯನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ರಾಸಾಯನಿಕ ವರದಿಯನ್ನು ಯಾರ ಮುಖೇನ ಸ್ವೀಕರಿಸಿಕೊಂಡಿರುತ್ತೇನೆ ಎಂದು ನೆನಪಾಗುತ್ತಿಲ್ಲ. ಸಾಮಾನ್ಯವಾಗಿ ರಾಸಾಯನಿಕ ವರದಿಯನ್ನು ಸಬ್ ಡಿವಿಶನ್ ನಿಂದ ನಮಗೆ ಕಳುಹಿಸಿಕೊಡಲಾಗುತ್ತದೆ. ಸದರಿ ವರದಿಯನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವರದಿಯ ಮೇಲೆ DySP ಸಹಿ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಯಾರು ಮುಖೇನ Assessment Extract ನ್ನು ಕೋರಿಕೊಂಡಿರುತ್ತೇನೆ ಮತ್ತು ಪಡೆದುಕೊಂಡಿರುತ್ತೇನೆ ಎಂದು ನೆನಪಾಗುತ್ತಿಲ್ಲ. ನಾನು ಯಾರು ಮುಖೇನ ಗಾಯದ ಪ್ರಮಾಣ ಪತ್ರವನ್ನು ಕೋರಿಕೊಂಡಿರುತ್ತೇನೆ ಮತ್ತು ಪಡೆದುಕೊಂಡಿರುತ್ತೇನೆ ಎಂದು ನೆನಪಾಗುತ್ತಿಲ್ಲ. ಸದರಿ ವರದಿಯನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಇಲಾಖಾ ಅಂಕಿ ಅಂಶಕ್ಕೋಸ್ಕರ ಸುಳ್ಳು ಪ್ರಕರಣವನ್ನು ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ.

ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.